SEVA BHARATHI
सेवा ही परमो धर्मः
ಸಂಪುಟ : 06
ಸಂಚಿಕೆ : 03

# ಸೇವಾಪಥ

ಸೇವಾಭಾರತಿ(ರಿ.), ಬೆಳ್ತಂಗಡಿ ತಾ॥ ಇದರ
(ರಾಜ್ಯ ಪ್ರಶಸ್ತಿ ಪುರಸ್ಕೃತ ಸೇವಾ ಸಂಸ್ಥೆ-2022)
ಮಾಸಿಕ e–ನ್ಯೂಸ್ ಲೆಟರ್ – ಮಾರ್ಚ್ 2025
ಪ್ರಧಾನ ಕಚೇರಿ : ಸೇವಾನಿಕೇತನ, ಕನ್ಯಾಡಿ–II, ಧರ್ಮಸ್ಥಳ ಅಂಚೆ, ಬೆಳ್ತಂಗಡಿ ತಾಲೂಕು, ದ.ಕ. – 574 216




## ಸೇವಾಭಾರತಿಯ 20ನೇ ವರ್ಷದ ಸಂಭ್ರಮ 2023–24, ಸಾಧನ ಸಲಕರಣೆಗಳ ವಿತರಣೆ ಮತ್ತು ನೂತನ ಟ್ರಸ್ಟಿಗಳ ಸೇರ್ಪಡೆ

## ಸೇವಾಭಾರತಿ ಆಶ್ರಯದಲ್ಲಿ "100ನೇ ಬೃಹತ್ ರಕ್ತದಾನ ಶಿಬಿರ", 65 ಯೂನಿಟ್ ರಕ್ತ ಸಂಗ್ರಹ

## 31ನೇ ಉಚಿತ ಟೈಲರಿಂಗ್ ತರಬೇತಿ ಶಿಬಿರ ಉದ್ಘಾಟನೆ, ಮಹಿಳಾ ಸಬಲೀಕರಣಕ್ಕೆ ದಾರಿ

## ಬೆನ್ನುಹುರಿ ಅಪಘಾತಕ್ಕೊಳಗಾಗಿದ್ದರೂ ಮಲ್ಲಿಗೆ ವ್ಯಾಪಾರದಲ್ಲಿ ಜೀವನವನ್ನು ರೂಪಿಸಿಕೊಂಡ ಶೇಖರ್ ಬೈಪಾಡಿಯವರ ಯಶೋಗಾಥೆ

## ನಮ್ಮಿಂದಿಷ್ಟು

ಎಲ್ಲರಿಗೂ ನಮಸ್ಕಾರಗಳು,

20ನೇ ವರ್ಷದ ಸಂಭ್ರಮವನ್ನಷ್ಟೇ ಹೇಳಬೇಕಿರುವುದು, ಈವರೆಗಿನ ಕೆಲಸ ಕಾರ್ಯಗಳ ವರದಿಯನ್ನು ನೀಡಿ ಮುಂದಿರುವ ಯೋಜನೆಯ ಅನುಷ್ಠಾನದ ಬಗ್ಗೆ ತಿಳಿಸಿ ಸಹಕಾರ ನೀಡಲು ಅಪೇಕ್ಷಿಸುವುದು, ಪ್ರತಿ ಸಂಘಟನೆಯ ವಾರ್ಷಿಕ ಸಂಭ್ರಮದ ಹೂರಣ. ಎಷ್ಟು ಮನಸ್ಸು ಸಂಭ್ರಮಿಸುತ್ತೋ ಅಷ್ಟು ಸಂಘಟನೆಯು ಸಂಭ್ರಮಿಸಬೇಕು. ಇದು ಮನದ ಅಪೇಕ್ಷೆ. ನನ್ನ 29 ವರ್ಷಗಳ ಇಂತಹ ದೈಹಿಕ ಸ್ಥಿತಿಯಲ್ಲಿ 20 ವರ್ಷಗಳಷ್ಟು ಸಂಸ್ಥೆಯ ಹುಟ್ಟು ಮತ್ತು ಬೆಳವಣಿಗೆಯಲ್ಲಿ ಪೂರ್ತಿ ತೊಡಗುವಿಕೆಗೆ ನನ್ನ ಅಣ್ಣ ಅಕ್ಕಂದಿರು, ಸನ್ಮಿತ್ರರು ಅದಕ್ಕಿಂತಲೂ ಹೆಚ್ಚಾಗಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಾರ್ಯಕರ್ತರು, ಹಿರಿಯರು ಎಂದರೆ ಹಗಲಿನಷ್ಟು ಸತ್ಯ.

ಸಂಸ್ಥೆಯ 20 ವರ್ಷಗಳಲ್ಲಿ ಏಳು ವರ್ಷಗಳ ಸೇವಾಧಾಮದ ಕಾರ್ಯಚಟುವಟಿಕೆಗಳು ಸಂಸ್ಥೆಯದ್ದು, ಒಂದು ರೀತಿಯಲ್ಲಿ ಉತ್ತುಂಗ ಮಟ್ಟಕ್ಕೇರಿಸಿದೆ. ಸೇವಾ ವ್ಯಾಪ್ತಿಯನ್ನು ಆರು ಜಿಲ್ಲೆಗಳಲ್ಲಿ ವಿಸ್ತರಿಸಿದ್ದರೂ ಸೇವೆಯ ಕಂಪು ರಾಜ್ಯವನ್ನು ಮೀರಿಸಿದೆ. ಬೆನ್ನುಹುರಿ ಅಪಘಾತಕ್ಕೊಳಗಾದ ವ್ಯಕ್ತಿ ತಾನು ಬದುಕಿ ವಿಶ್ವಾಸದಿಂದ ಬಾಳಬಲ್ಲೆ ಎಂಬ ನಿರ್ಧಾರಕ್ಕೂ ಸೇವಾಧಾಮ ಕಾರಣವಾಗಿದೆ ಎಂದರೆ ಸಂಸ್ಥೆಯ ಅನೇಕ ಕೊಡುಗೈ ದಾನಿಗಳ, ಕಾರ್ಯಕರ್ತರ, ಸಿಬ್ಬಂದಿಗಳ ಪರಿಶ್ರಮದೊಂದಿಗೆ ಭಗವಂತನ ಕೃಪೆಯೇ ಕಾರಣ.

ಬೆನ್ನುಹುರಿ ಅಪಘಾತಕ್ಕೊಳಗಾದವರು ಸಣ್ಣ ಗೂಡಂಗಡಿ ಇಟ್ಟು ವ್ಯಾಪಾರ ಪ್ರಾರಂಭಿಸಿದ್ದು, ಸಣ್ಣಸಣ್ಣ ಬೆಂಚುಗಳನ್ನು ಇಟ್ಟು ಎಳೆನೀರು ಮಾರುತ್ತಿರುವುದು, URW ಆಗಿ ನಗರಸಭೆಯ ವ್ಯಾಪ್ತಿಯಲ್ಲಿ ಕೆಲಸ ಮಾಡುವುದು, ಎಲೆಕ್ಟ್ರಿಕಲ್ ಬಲ್ಬ್, ಸೋಲಾರ್ ಮಾಲೆಗಳನ್ನು ರೆಡಿ ಮಾಡುವುದು, ಐಟಿ ಕಂಪನಿ ಪ್ರಾರಂಭಿಸಿ 30 ಮಂದಿಗೆ ಉದ್ಯೋಗ ದೊರಕಿಸಿ–ಕೊಟ್ಟಿರುವುದು, ಮನೆಕೆಲಸದೊಂದಿಗೆ ಕೃಷಿ ಹೈನುಗಾರಿಕೆಯಲ್ಲಿ ತೊಡಗಿರುವುದು, ಟ್ರೈನರ್ ಆಗಿ ಪುನಶ್ಚೇತನ ಕೇಂದ್ರದಲ್ಲಿ ದುಡಿಯುತ್ತಿರುವುದು, ಭಜನಾಪಟುವಾಗಿ ಮಕ್ಕಳ ಭಜನಾ ಮಂಡಳಿಯನ್ನೇ ಕಟ್ಟಿ ಮುನ್ನಡೆಸುತ್ತಿರುವುದು, ಕ್ರಿಕೆಟ್‌ನ ಪ್ರೇಮಿಯಾಗಿ ಕ್ರಿಕೆಟ್ ಲೀಗ್ ಮ್ಯಾಚ್ ಆಯೋಜಿಸುತ್ತಿರುವುದು, ರೆಟ್ರೋಫಿಟರ್ ಸ್ಕೂಟರ್‌ನಲ್ಲಿ ಮೀನು ಮಾರಾಟ ಮಾಡುವ ಕಾಯಕ ಇವೆಲ್ಲವನ್ನು ನೋಡುವಾಗ ಯಾರು ತಾನೆ ಖುಷಿ ಪಡದಿರಲು ಸಾಧ್ಯ? ಅವುಗಳಿಂದಾಗಿ ಬದುಕು ಹೆಮ್ಮೆ ಅನಿಸುತ್ತದೆ. ಮತ್ತೆ–ಮತ್ತೆ ಬದುಕಬೇಕು ಅನ್ನಿಸುತ್ತದೆ. ಬಾಕಿಯವರ ಬಿದ್ದುಹೋದ ಬದುಕಿಗೂ ಭವ್ಯ ಭರವಸೆಯನ್ನು ತುಂಬಿ ಅವರ ಬದುಕಿಗೂ ಬೆಲೆ ಬರುವಂತೆ ಮಾಡಬೇಕೆಂಬ ಉಕ್ಕುವ ಛಲ ತುಂಬಿ ಬರುತ್ತದೆ. ಅಂತಹ ಛಲವೇ ಸಾಮಾಜಿಕ ಸೇವಾ ಕಾರ್ಯಗಳಿಗೆ ಮುನ್ನುಡಿ. 100ನೇ ರಕ್ತದಾನ ಶಿಬಿರ ಇಪ್ಪತ್ತನೇ ವರ್ಷದ ಸಂಭ್ರಮಾಚರಣೆಯೊಂದಿಗೆ ನಡೆಯಿತು 31ನೇ ಟೈಲರಿಂಗ್ ಶಿಬಿರ ಅರಸಿನಮಕ್ಕಿಯಲ್ಲಿ ನಡೆಯುತ್ತಿರುವುದು ಉಲ್ಲೇಖನಿಯ ಉಳಿದಂತೆ ಕಟ್ಟಡ ನಿರ್ಮಾಣ ಕಾರ್ಯ ಮುಂದುವರೆಯುತ್ತಿದೆ.



**ಸೇವಾ ಹೀ ಪರಮೋ ಧರ್ಮಃ**

ತಾಯಿ ಭಾರತೀಯ ಸ್ಮರಣೆಗಳೊಂದಿಗೆ,

ಇತಿ ತಮ್ಮವ,

**ಕೆ. ವಿನಾಯಕ ರಾವ್**

## ನಮ್ಮ ವಿಳಾಸ

**ಪ್ರಧಾನ ಕಚೇರಿ :**

ಸೇವಾನಿಕೇತನ, ಕನ್ಯಾಡಿ–॥
ಧರ್ಮಸ್ಥಳ ಗ್ರಾಮ, ಬೆಳ್ತಂಗಡಿ ತಾಲೂಕು – 574 216
ಮೊ.: 99454 91241

**ಸೇವಾ ಕೇಂದ್ರ :**

ಸೇವಾಧಾಮ
(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ)
ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಬಳಿ
ಕೊಕ್ಕಡ ಗ್ರಾಮ – 574 198
ಮೊ.: 94482 54888

## ನಮ್ಮ ತಂಡ

| | |
|---|---|
| ಶ್ರೀಮತಿ ಸ್ವರ್ಣಗೌರಿ | – ಅಧ್ಯಕ್ಷರು |
| ಶ್ರೀ ಕೆ. ಯು. ಗಿರೀಶ್ ರಾವ್ | – ಉಪಾಧ್ಯಕ್ಷರು |
| ಶ್ರೀ ಕೆ. ಬಾಲಕೃಷ್ಣ | – ಕಾರ್ಯದರ್ಶಿ |
| ಶ್ರೀ ಕೆ. ವಿನಾಯಕ ರಾವ್ | – ಖಜಾಂಚಿ |
| ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ | – ಟ್ರಸ್ಟಿ |
| ಶ್ರೀ ಜಯರಾಜ್ ಸಾಲ್ಯಾನ್ | – ಟ್ರಸ್ಟಿ |
| ಶ್ರೀ ಪೃಥ್ವೀಶ್ | – ಟ್ರಸ್ಟಿ |

## ಸಲಹಾ ಮಂಡಳಿ

1. ಶ್ರೀ CA ಗುಜ್ಜಾಡಿ ಪ್ರಭಾಕರ ನರಸಿಂಹ ನಾಯಕ್
2. ಡಾ. ಎ. ಜಯಕುಮಾರ್ ಶೆಟ್ಟಿ
3. ಶ್ರೀಮತಿ ಮನೋರಮ ಭಟ್
4. ಶ್ರೀ ವಿಜಯ ಕೊಡವೂರು
5. ಶ್ರೀ ಆದಿತ್ಯ ಕಲ್ಲೂರಾಯ
6. ಶ್ರೀ ಕಿರಣ್ ರಾಜ್ ಕೆ.

## ಸಂಚಾಲಕರು

ಶ್ರೀ ಕೆ. ಪುರಂದರ ರಾವ್

# ಸೇವಾಭಾರತಿಯ 20ನೇ ವರ್ಷದ ಸಂಭ್ರಮ 2023–24 ಸಾಧನ ಸಲಕರಣೆಗಳ ವಿತರಣೆ ಮತ್ತು ನೂತನ ಟ್ರಸ್ಟಿಗಳ ಸೇರ್ಪಡೆ













**ಕೊಕ್ಕಡ (ಮಾ.16) :** ಸೇವಾಭಾರತಿ ಬೆಳ್ತಂಗಡಿ ತಾಲೂಕು ಇದರ 20ನೇ ವರ್ಷದ ಸಂಭ್ರಮ ಹಾಗೂ ರಕ್ತದಾನ ಶಿಬಿರ, ಸಾಧನ ಸಲಕರಣೆಗಳ ವಿತರಣೆ ಹಾಗೂ ನೂತನ ಟ್ರಸ್ಟಿಗಳ ಸೇರ್ಪಡೆ ಕಾರ್ಯಕ್ರಮವು ಸೌತಡ್ಕ, ಸೇವಾಧಾಮ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರದಲ್ಲಿ ಮಾರ್ಚ್ 16 ರಂದು ನಡೆಯಿತು.

ಕಾರ್ಯಕ್ರಮವನ್ನು ಉಡುಪಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಜೇಷ್ಠ ಪ್ರಚಾರಕರಾದ ದಾ.ಮ. ರವೀಂದ್ರ ಉದ್ಘಾಟಿಸಿ ಸೇವಾಧಾಮ ಮಾಡುವ ಕಾರ್ಯಚಟುವಟಿಕೆಗಳನ್ನು ಶ್ಲಾಘಿಸಿ, ಇನ್ನು ಹೆಚ್ಚು ಸೇವೆ ಮಾಡುವ ಯಶಸ್ಸು ನಿಮ್ಮದಾಗಲಿ ಎಂದು ಶುಭ ಹಾರೈಸಿದರು.

ಅಧ್ಯಕ್ಷತೆಯನ್ನು ಸೇವಾಭಾರತಿ ಕನ್ಯಾಡಿ ಇದರ ಅಧ್ಯಕ್ಷರಾದ ಶ್ರೀಮತಿ ಸ್ವರ್ಣಗೌರಿ ವಹಿಸಿದ್ದರು.


ಈ ಸಂದರ್ಭದಲ್ಲಿ 5 ಮಂದಿ ಬೆನ್ನುಹುರಿ ಅಪಘಾತ–ಕ್ಕೊಳಗಾದ ದಿವ್ಯಾಂಗರಿಗೆ ಸಾಧನ ಸಲಕರಣೆಗಳ ವಿತರಣೆ, ಪೃಥ್ವೀಶ್ ಧರ್ಮಸ್ಥಳ ಮತ್ತು ಜಯರಾಜ್ ಸಾಲಿಯಾನ್ ಕಾನರ್ಪ ಇವರನ್ನು ನೂತನ ಟ್ರಸ್ಟಿಗಳಾಗಿ ಸೇರ್ಪಡೆಗೊಳಿಸಲಾಯಿತು. ಸೇವಾಭಾರತಿ ಟ್ರಸ್ಟಿ ಬಿ. ಕೃಷ್ಣಪ್ಪ ಗುಡಿಗಾರ್ ರವರಿಗೆ ಬೀಳ್ಕೊಡುಗೆ ಸಮಾರಂಭ, ಮತ್ತು 2023– 2024ರ ಬರವಣಿಗೆ ರೂಪದಲ್ಲಿರುವ ವಾರ್ಷಿಕ ವರದಿಯನ್ನು ಪುಸ್ತಕ ಮತ್ತು ವೀಡಿಯೋ ಮುಖಾಂತರ ಬಿಡುಗಡೆ ಮಾಡಲಾಯಿತು.

ಗೌರವ ಅತಿಥಿಗಳಾಗಿ ಬೆಳ್ತಂಗಡಿ ಸಮಾಜ ಸೇವಕರಾದ ಕಿರಣ್‌ಚಂದ್ರ ಡಿ. ಪುಷ್ಪಗಿರಿ, ಗುರುವಾಯನಕೆರೆ ಎಕ್ಸೆಲ್ ಪದವಿಪೂರ್ವ ಕಾಲೇಜಿನ ಅಧ್ಯಕ್ಷರಾದ ಸುಮಂತ್ ಕುಮಾರ್ ಬಿ.ಜೈನ್, ಉಡುಪಿ ಸಾರ್ವಜನಿಕ ಶ್ರೀ ಗಣೇಶೋತ್ಸವ ಸಮಿತಿ ಕಡಿಯಾಳಿ ಇದರ ಅಧ್ಯಕ್ಷರು ಹಾಗೂ ಭಾರತ ವಿಕಾಸ ಪರಿಷತ್ ಭಾರ್ಗವ ಶಾಖೆ ಉಡುಪಿ ಇದರ ಸಂಯೋಜಕರಾದ ವಸಂತ ಭಟ್, ಕನ್ಯಾಡಿಯ ಕೃಷಿಕರಾದ ಅರುಣ್ ಜೆ.ಎನ್ ರೆಬೆಲ್ಲೊ, ಕೊಕ್ಕಡ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷರಾದ ಕುಶಾಲಪ್ಪ ಗೌಡ ಪೂವಾಜೆ, ಸೌತಡ್ಕ ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್ ಕೊಕ್ಕಡ ಇದರ ಅಧ್ಯಕ್ಷರಾದ ಕೆ. ಕೃಷ್ಣ ಭಟ್, ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್, ಸೇವಾಧಾಮ ಸಂಚಾಲಕರಾದ ಕೆ. ಪುರಂದರ ರಾವ್, ಸೇವಾಭಾರತಿ ಟ್ರಸ್ಟಿ ವಿಷ್ಣುಪ್ರಸಾದ್ ತೆಂಕಿಲ್ಲಾಯ, ಸೇವಾಭಾರತಿ ಟ್ರಸ್ಟಿ ಬಿ. ಕೃಷ್ಣಪ್ಪ ಗುಡಿಗಾರ್ ನೂತನ ಟ್ರಸ್ಟಿಗಳಾದ ಪೃಥ್ವೀಶ್ ಧರ್ಮಸ್ಥಳ, ಜಯರಾಜ್ ಸಾಲಿಯಾನ್ ಕಾನರ್ಪ ಇವರುಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ನೂತನ ಟ್ರಸ್ಟಿ ಪೃಥ್ವೀಶ್ ಧರ್ಮಸ್ಥಳ ಸ್ವಾಗತಿಸಿ, ಸೇವಾಧಾಮ ಸಂಸ್ಥಾಪಕರಾದ ಕೆ. ವಿನಾಯಕ ರಾವ್ ಪ್ರಾಸ್ತಾವಿಕವಾಗಿ ಮಾತನಾಡಿ. ಡಾಕ್ಯುಮೆಂಟೇಶನ್ ಮಾನಿಟರಿಂಗ್ ಆ್ಯಂಡ್ ಇವ್ಯಾಲ್ಯೇಟಿಂಗ್ ಕೋ–ಆರ್ಡಿನೇಟರ್ ಸುಮ ನಿರೂಪಿಸಿ, ಸೇವಾಭಾರತಿ ಅಧ್ಯಕ್ಷರಾದ ಸ್ವರ್ಣಗೌರಿ ವಂದಿಸಿದರು.

# ಸೇವಾಭಾರತಿ ಆಶ್ರಯದಲ್ಲಿ “100ನೇ ಬೃಹತ್ ರಕ್ತದಾನ ಶಿಬಿರ”

## 65 ಯುನಿಟ್ ರಕ್ತ ಸಂಗ್ರಹ







**ಕೊಕ್ಕಡ(ಮಾ.16)** ಸೇವಾಭಾರತಿ ಬೆಳ್ತಂಗಡಿ ಇದರ ಆಶ್ರಯದಲ್ಲಿ ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿ ಮಂಗಳೂರು ಸಹಕಾರದಲ್ಲಿ ಶಿವಾಜಿ ಗ್ರೂಪ್ ಆಫ್ ಬಾಯ್ಸ್ ಕೊಕ್ಕಡ, ವೀರಕೇಸರಿ ಅನಾರು ಪಟ್ರಮೆ, ಕೇಸರಿ ಗೆಳೆಯರ ಬಳಗ ಕೊಕ್ಕಡ, ಹವ್ಯಕ ವಲಯ ಉಜಿರೆ ಇವುಗಳ ಸಹಭಾಗಿತ್ವದಲ್ಲಿ 100ನೇ ಬೃಹತ್ ರಕ್ತದಾನ ಶಿಬಿರ ಸೌತಡ್ಕ, ಸೇವಾಧಾಮ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರದಲ್ಲಿ ಮಾರ್ಚ್ 16 ರಂದು ಜರುಗಿತು.

ಕಾರ್ಯಕ್ರಮವನ್ನು ಕೊಕ್ಕಡ ಶ್ರೀರಾಮ ಸೇವಾ ಸಮಿತಿ ಕಾರ್ಯದರ್ಶಿ ಶಶಿ ಕೊಕ್ಕಡ ಉದ್ಘಾಟಿಸಿ ಶುಭಹಾರೈಸಿದರು.

ಮುಖ್ಯ ಅತಿಥಿಗಳಾಗಿ ಉಜಿರೆ, ಹವ್ಯಕ ವಲಯ ಉಪಾಧ್ಯಕ್ಷರಾದ ಶಿವರಾಮ ಭಟ್ ಹಿತ್ತಿಲು, ಕೊಕ್ಕಡ ಶಿವಾಜಿ ಗ್ರೂಪ್ ಆಫ್ ಬಾಯ್ಸ್ ಇದರ ಅಧ್ಯಕ್ಷರಾದ ಕಿಶೋರ್ ಪೊಯ್ಯೊಳೆ, ಕೊಕ್ಕಡ ಕೇಸರಿ ಗೆಳೆಯರ ಬಳಗದ ಅಧ್ಯಕ್ಷ ಶರತ್ ಕೊಕ್ಕಡ, ಮಂಗಳೂರು ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿಯ ಡಿಸ್ಟ್ರಿಕ್ಟ್ ಕೋ–ಆರ್ಡಿನೇಟರ್ ಪ್ರವೀಣ್ ಕುಮಾರ್, ಸೇವಾಭಾರತಿಯ ಅಧ್ಯಕ್ಷರಾದ ಶ್ರೀಮತಿ ಸ್ವರ್ಣಗೌರಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ನೂತನ ಟ್ರಸ್ಟಿ ಜಯರಾಜ್ ಕಾನರ್ಪ ಸ್ವಾಗತಿಸಿ ಸೇವಾಭಾರತಿಯ ಅನುಸರಣೆ ಮತ್ತು ಹಣಕಾಸು ವ್ಯವಸ್ಥಾಪಕ ಮೋಹನ್ ಎಸ್ ಕಾರ್ಯಕ್ರಮ ನಿರೂಪಿಸಿ. ಫೀರ್‌ಟ್ರೈನರ್ ಆಂಟೋನಿ ಧನ್ಯವಾದವಿತ್ತರು.

ಒಟ್ಟು 65 ಯೂನಿಟ್ ರಕ್ತವನ್ನು ಸಂಗ್ರಹಿಸಲಾಯಿತು.

## 31ನೇ ಉಚಿತ ಟೈಲರಿಂಗ್ ತರಬೇತಿ ಶಿಬಿರ ಉದ್ಘಾಟನೆ, ಮಹಿಳಾ ಸಬಲೀಕರಣಕ್ಕೆ ದಾರಿ





**ಅರಸಿನಮಕ್ಕಿ (ಮಾ.09):** ಕನ್ಯಾಡಿ ಸೇವಾಭಾರತಿ ಇದರ ನೇತೃತ್ವದಲ್ಲಿ ಸಬಲಿನಿ ಯೋಜನೆಯಡಿ, ಅರಸಿನಮಕ್ಕಿ ಗ್ರಾಮ ಪಂಚಾಯತಿ ಮತ್ತು ಹತ್ಯಡ್ಕ ಪ್ರಾಥಮಿಕ ಕೃಷಿಪತ್ತಿನ ಸಹಕಾರಿ ಸಂಘ (ನಿ.) ಸಹಭಾಗಿತ್ವದಲ್ಲಿ ಮಹಿಳೆಯರಿಗಾಗಿ ಉಚಿತ 31ನೇ ಟೈಲರಿಂಗ್ ತರಬೇತಿ ಶಿಬಿರದ ಉದ್ಘಾಟನೆ ಮಾರ್ಚ್ 09 ರಂದು ಅರಸಿನಮಕ್ಕಿ ಹತ್ಯಡ್ಕ ಸಿ.ಎ. ಬ್ಯಾಂಕಿನ ಸಭಾಂಗಣದಲ್ಲಿ ನಡೆಯಿತು. ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ಅರಸಿನಮಕ್ಕಿ ಗ್ರಾಮಪಂಚಾಯತಿ ಅಧ್ಯಕ್ಷೆ ಗಾಯತ್ರಿ ಚಾಲನೆ ನೀಡಿ, ಭಾಗವಹಿಸಿದ ಮಹಿಳೆಯರಿಗೆ ಶುಭಹಾರೈಸಿದರು. ತಮ್ಮ ಉದ್ಬೋಧನೆಯಲ್ಲಿ ಮಹಿಳಾ ಸಬಲೀಕರಣದ ಮಹತ್ವವನ್ನು ಉಲ್ಲೇಖಿಸಿ, ಈ ತರಬೇತಿ ಶಿಬಿರವು ಸ್ವ–ಉದ್ಯೋಗದ ಕಡೆಗೆ ಮಹತ್ವದ ಹೆಜ್ಜೆಯಾಗಿದೆ ಎಂದರು.

ಸೇವಾಭಾರತಿ ಕನ್ಯಾಡಿಯ ಅಧ್ಯಕ್ಷರಾದ ಹಾಗೂ ಬೆಳ್ತಂಗಡಿ ತಾಲೂಕು ಮಹಿಳಾ ಸಹಕಾರಿ ಸಂಘದ ಸಿಇಒ ಸ್ವರ್ಣಗೌರಿ ಮಾತನಾಡಿ, ಟೈಲರಿಂಗ್ ಕಲಿಕೆ ಅನೇಕ ಉದ್ಯೋಗದ ಅವಕಾಶಗಳನ್ನು ಒದಗಿಸಬಲ್ಲದು. “ದೀಪಜ್ಯೋತಿ ಹೇಗೆ ಬೆಳಗುತ್ತದೋ, ಹಾಗೆಯೇ ನೀವು ಈ ವಿದ್ಯೆಯನ್ನು ಉಪಯೋಗಿಸಿ ಸಮಾಜದಲ್ಲಿ ಬೆಳಗಬೇಕು” ಎಂದು ಶುಭಹಾರೈಸಿದರು.

ಈ ಸಮಾರಂಭದಲ್ಲಿ ಅರಸಿನಮಕ್ಕಿ ಗ್ರಾಮ ಪಂಚಾಯತಿ ಉಪಾಧ್ಯಕ್ಷ ಸುಧೀರ್ ಕುಮಾರ್, ಕನ್ಯಾಡಿ ಶ್ರೀ ದುರ್ಗಾ ಮಾತೃಮಂಡಳಿ ಅಧ್ಯಕ್ಷೆ ಶಾಂತ ಪಿ. ಶೆಟ್ಟಿ ಅರಿಕೆಗುಡ್ಡೆ ಶ್ರೀ ವನದುರ್ಗಾ ದೇವಸ್ಥಾನದ ಮಹಿಳಾ ಕಾರ್ಯದರ್ಶಿ ನೀತಾ ರಾಧೇಶ್ ಆಚಾರ್ಯ, ಹಿರಿಯ ಟೈಲರಿಂಗ್ ತರಬೇತುದಾರರಾದ ಶಕುಂತಳಾ ಎಂ. ಆಚಾರ್ಯ ಮತ್ತು ತರಬೇತುದಾರರಾದ ರೇಷ್ಮಾ ಜಯಪ್ರಸಾದ್ ಶೆಟ್ಟಿ ಇವರುಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಶಿಬಿರದಲ್ಲಿ ಒಟ್ಟು 31 ಮಂದಿ ಮಹಿಳಾ ಶಿಬಿರಾರ್ಥಿಗಳು ಭಾಗವಹಿಸಿದ್ದು, ಮಹಿಳಾ ಸಬಲೀಕರಣದತ್ತ ಮತ್ತೊಂದು ಮಹತ್ವದ ಹೆಜ್ಜೆಯಾಗಿದೆ. ಕಾರ್ಯಕ್ರಮದಲ್ಲಿ ಧನ್ಯ ಸ್ವಾಗತಿಸಿ, ಸೇವಾಭಾರತಿಯ ಡಾಕ್ಯುಮೆಂಟೇಶನ್, ಮೋನಿಟರಿಂಗ್ ಮತ್ತು ಇವ್ಯಲ್ಯೂವೇಟಿಂಗ್ ಕೋ–ಆರ್ಡಿನೇಟರ್ ಸುಮ ನಿರೂಪಿಸಿ, ಭಾರತಿ ವಂದಿಸಿದರು.

## ಸೇವಾನಿಧಿ ದಾನಿಗಳು

ಶ್ರೀ ರಾಜೇಶ್ ಫಡ್ಕೆ, ಬೆಂಗಳೂರು
ಶ್ರೀ ಬಾಲಸುಬ್ರಹ್ಮಣ್ಯ, ಬೆಂಗಳೂರು
ಶ್ರೀ ಸಂತೋಷ್ ಕೆ., ಕೊಕ್ಕಡ
ಶ್ರೀ ರಾಜಾರಾಮ್ ಕಾರಂತ್, ಬೆಂಗಳೂರು
ಶ್ರೀ ಕೆ. ಪುರಂದರ ರಾವ್, ನಾರ್ಯಾ
ಶ್ರೀಮತಿ ಜಯಂತಿ ಪುರಂದರ ರಾವ್, ನಾರ್ಯಾ
ಶ್ರೀ ಅಖಿಲೇಶ್ ಕೆ.ಎಲ್, ಪುತ್ತೂರು
ಶ್ರೀಮತಿ ಸ್ವರ್ಣಗೌರಿ, ಧರ್ಮಸ್ಥಳ
ಶ್ರೀಮತಿ ದಿವ್ಯ ಪುರಂದರ ರಾವ್, ಬೆಂಗಳೂರು
ಶ್ರೀ ಕಾರ್ತಿಕ್ ಕೆ., ಕನ್ಯಾಡಿ
ಮಾಸ್ಟರ್ ಅದ್ವೈತ್ ಪೈ, ಕನ್ಯಾಡಿ
ಶ್ರೀ ರಾಘವೇಂದ್ರ ಶಾಸ್ತ್ರಿ, ಧರ್ಮಸ್ಥಳ
ಶ್ರೀಮತಿ ಬಬಿತಾ, ಕನ್ಯಾಡಿ
ಶ್ರೀ ಜಯಾನಂದ, ಧರ್ಮಸ್ಥಳ
ಶ್ರೀ ಸುರೇಂದ್ರ ಕುಡುವ, ಉಜಿರೆ
ಶ್ರೀ ಕೆ. ರಮೇಶ್, ಬೆರ್ಕೆ
ಶ್ರೀ ಸುನಿಲ್ ಪಿ., ಕನ್ಯಾಡಿ
ಶ್ರೀ ನೀಲಕಂಠ, ನಾರ್ಯಾ
ಶ್ರೀ ಗೌರಿಶಂಕರ, ಧರ್ಮಸ್ಥಳ
ಶ್ರೀ ವಿನಾಯಕ ರಾವ್, ಕನ್ಯಾಡಿ
ಶ್ರೀ ರಾಮದಾಸ್ ಭಂಡಾರ್ಕರ್, ಉಜಿರೆ
ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ, ಉಡುಪಿ
ಶ್ರೀ ಶ್ರೀಧರ ಕೆ.ವಿ, ಉಜಿರೆ
ಹೋಟೆಲ್ ಬಾಂಬೆಡೈನ್, ಉಜಿರೆ
ಶ್ರೀ ಪ್ರಜೇಶ್, ಧರ್ಮಸ್ಥಳ
ಶ್ರೀ ಶೆಲ್ಡನ್ ಮೋನಿಸ್, ಮದ್ದಡ್ಕ
ಶ್ರೀ ಸುಹಾಸ್ ಲೆಕ್ಕಾಡಿ, ಸುಳ್ಯ
ಬೇಬಿಶ್ರೀ ಬಿಲ್ವನಿ, ಉಜಿರೆ
ಶ್ರೀ ಜಿ. ಪುಟ್ಟಸ್ವಾಮಿ, ಉಜಿರೆ
ಶ್ರೀ ಬಿ. ಕೃಷ್ಣಪ್ಪ ಗುಡಿಗಾರ್, ಕಲ್ಮಂಜ
ಶ್ರೀ ಬಿ. ಪುರಂದರ, ನಾರ್ಯಾ
ಶ್ರೀ ಮಧ್ವರಾಜ್ ಎಂ.ಜಿ, ಧರ್ಮಸ್ಥಳ
ಶ್ರೀ ಉದಯಶಂಕರ್ ಕೆ., ಅರಸಿನಮಕ್ಕಿ
ವೆಲ್ವೆಟ್ ಟ್ರಾವೆಲ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು
ಶ್ರೀ ಪುರುಷೋತ್ತಮ ಡಿ.ಎ., ಧರ್ಮಸ್ಥಳ
ಮಾಸ್ಟರ್ ರಾಹುಲ್ ಪ್ರಭು, ಕನ್ಯಾಡಿ
ಶ್ರೀ ಶಿವಕುಮಾರ, ಉಜಿರೆ
ಶ್ರೀಮಧುಸೂಧನ್, ಉಜಿರೆ
ಶ್ರೀ ಲಕ್ಷ್ಮೀ ನಾರಾಯಣ ರಾವ್, ಧರ್ಮಸ್ಥಳ
ಡಾ. ರಾಮಕೃಷ್ಣ ಭಟ್ ಜಿ.ಎನ್, ಕನ್ಯಾಡಿ
ಶ್ರೀ ರಜತ್ ಕುಮಾರ್ ಜೆ.ಡಿ, ವೇಣೂರು
ಶ್ರೀ ಸುನಿಲ್ ಕುಮಾರ್ ಜೈನ್, ಧರ್ಮಸ್ಥಳ
ಶ್ರೀ ಚಂದ್ರಶೇಖರ್ ಬಿ, ಸವಣೂರು
ಶ್ರೀ ಜಿ ರಾಘವೇಂದ್ರ ತೇಜ, ಧರ್ಮಸ್ಥಳ
ಶ್ರೀ ಅರ್ಜುನ್ ಸಿ, ತೀರ್ಥಹಳ್ಳಿ
ಶ್ರೀ ಗಣೇಶ್ ಭಟ್, ಧರ್ಮಸ್ಥಳ

## ವಸ್ತು ರೂಪದಲ್ಲಿ ದೇಣಿಗೆ ನೀಡಿದವರು

ಉಜಿರೆ ಹವ್ಯಕ ವಲಯ, ಉಜಿರೆ
ಶ್ರೀ ರಾಧಾಕೃಷ್ಣ, ಮೂಡಿಗೆರೆ

## ಮಹನೀಯ ದಾನಿಗಳು

ಕು। ಬಿ.ವಿ. ಪೂಜಾ, ಬೆಂಗಳೂರು
ಶ್ರೀ ಪರಮೇಶ್ವರ ಎಂ, ಉಜಿರೆ
ಡಾ. ಸುಮನ್ ದಿನೇಶ್ ಹೆಗ್ಡೆ, ಶಿರಸಿ
ಶ್ರೀ ಕೆ. ಪ್ರಭಾಕರನ್, ಸುಳ್ಯ
ಶ್ರೀ ರಾಮಚಂದ್ರ ಪೆರಿಯಡ್ಕ, ಸುಳ್ಯ
ಕು। ಬಿಂದ್ಯಾ ಆರ್, ಪುತ್ತೂರು
ಶ್ರೀ ಅರುಣ್ ಜಿ. ಹೆಗ್ಡೆ, ಕಾರವಾರ
ಶ್ರೀ ಲಕ್ಷ್ಮೀನಾರಾಯಣ ರಾವ್, ಧರ್ಮಸ್ಥಳ
ಶ್ರೀ ಗೌರಿ ಶಂಕರ, ಧರ್ಮಸ್ಥಳ
ಶ್ರೀ ಪಣಂಬೂರು ಬಾಲಕೃಷ್ಣ ರಾವ್, ಬೆಂಗಳೂರು
Ms. ಐಸಿರಿ ಹೇಮಾ ಮುರುಗೇಶ್, ದಾವಣಗೆರೆ
ಶ್ರೀ ಕಿರಣ್‌ಚಂದ್ರ ಡಿ. ಪುಷ್ಪಗಿರಿ, ಉರುವಲು
ದಿ ಹೇಮಂತ್ ಶಂಕರ್‌ಗುಪ್ತೆ, ಮುಂಬೈ
ಶ್ರೀ ನಾರಾಯಣ ಗೌಡ, ಸೋಮಂತಡ್ಕ
ಶ್ರೀ ಕೃಷ್ಣ ಮಂಜುನಾಥ ಪೂಜಾರಿ, ಶಿರಸಿ
ನೀಲಂ ಗುಪ್ತ, ಮುಂಬೈ
ಶ್ರೀ ಶ್ರೀರಾಮ್, ಮೇಲಂತಬೆಟ್ಟು
ಕು। ಶ್ರೇಯಾ, ಮೂಡಿಗೆರೆ
ಶ್ರೀ ರಾಜಾಶಂಕರ್ ಕೆ., ಚಿಕ್ಕಮಗಳೂರು
ಶ್ರೀ ಸುರೇಂದ್ರ ಕುಡುವ, ಉಜಿರೆ
ಶ್ರೀ ಎಂ. ಗೋಪಿನಾಥ ಪ್ರಭು, ಗುರುವಾಯನಕೆರೆ
ಶ್ರೀ ಶ್ಯಾಮ ಭಟ್, ಉಜಿರೆ
ಶ್ರೀ ಜಗದೀಶ, ಕನ್ಯಾಡಿ
ಶ್ರೀ ಶಶಿಧರ ಶಿವರಾಮ ಖಾಡಿಲ್ಕರ್, ಮುಂಡಾಜೆ
ಶ್ರೀ ಮುಕುಂದ ದೇವದಾರ್, ನಿಡ್ಲೆ
ಶ್ರೀ ರವಿದಾಸ್, ಧರ್ಮಸ್ಥಳ
ಶ್ರೀ ತುಕಾರಾಮ ಸಾಲಿಯಾನ್, ಕಲ್ಮಂಜ
ಶ್ರೀ ಬಿ. ಕೃಷ್ಣಪ್ಪ ಗುಡಿಗಾರ್, ಕಲ್ಮಂಜ
ಶ್ರೀ ಬಿ. ನವೀನ್‌ಚಂದ್ರ, ಧರ್ಮಸ್ಥಳ
ಶ್ರೀ ರಾಮಪ್ರಸಾದ್ ಯು.ಎಂ, ಗೋಣಿಬೀಡು
ಕು। ಸಮೀಕ್ಷಾ, ಅಳದಂಗಡಿ
ಶ್ರೀ ಪ್ರದೀಪ್ ಮತ್ತು ಶ್ರೀಮತಿ ಸ್ವಾತಿ, ವೇಣೂರು
ಶ್ರೀ ವಿನಯ್ ಪರಮೇಶ್ವರ ಭಟ್, ಶಿರಸಿ
ಅನ್ನಪೂರ್ಣ ಮೆಡಿಕಲ್ ಮತ್ತು ಜನರಲ್ ಸ್ಟೋರ್, ಧರ್ಮಸ್ಥಳ
ನೈಮಿಷ ಸ್ಪೈಸಸ್ ಅಂಡ್ ಕೆಫೆ, ಸೌತಡ್ಕ
ಶ್ರೀ ಕಾಂತಪ್ಪಗೌಡ, ಸೌತಡ್ಕ
ಶ್ರೀ ಕೆ. ಆರ್. ಸುರೇಶ್, ಶೃಂಗೇರಿ
ಶ್ರೀ ಶಿವಶಂಕರ ಸಿ.ಎ., ಶೃಂಗೇರಿ
ಶ್ರೀ ಲೋಕೇಶ್ ಕೆ ವಿ, ಸೋಮವಾರಪೇಟೆ
ಶ್ರೀ ರಜತ್ ರಾವ್, ಧರ್ಮಸ್ಥಳ
ಶ್ರೀ ಬೇಲೂರು ಲಕ್ಷ್ಮೀ ನಾರಾಯಣ, ಬೆಂಗಳೂರು

## ದೇಣಿಗೆ ನೀಡಿದ ಸಂಘ ಸಂಸ್ಥೆಗಳು

Magnus Lubricants Private Limited, Maharastra
Infinity Learning Foundation, Guruvayanakere
Swami Vivekanand Youth Movement, madikeri
LSG SKY CHEFS (INDIA) Private Limited, Bangalore

## ವಿಜ್ಞಾಪನೆಗಳು





ಸೇವಾಭಾರತಿ ಸಂಸ್ಥೆಯು ಕಳೆದ 20 ವರ್ಷಗಳಲ್ಲಿ ಸಾಮಾಜಿಕ–ವಾಗಿ ಬೇರೆ – ಬೇರೆ ಕ್ಷೇತ್ರಗಳಲ್ಲಿ ಸೇವಾ ಕಾರ್ಯಗಳನ್ನು ಮಾಡುತ್ತ ಬರುತ್ತಿದ್ದು, ಸಬಲಿನಿ ಯೋಜನೆಯಡಿ ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ ಉಚಿತ ಟೈಲರಿಂಗ್ ತರಬೇತಿಗಳು, ಆರೋಗ್ಯಮ್ ಯೋಜನೆಯಡಿ ಆಂಬುಲೆನ್ಸ್ ಸೇವೆ ಹಾಗೂ ರಕ್ತದಾನ ಶಿಬಿರಗಳು, ಸೇವಾಧಾಮ ಯೋಜನೆಯಡಿ ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ, ಈ ಮೂರು ಯೋಜನೆಗಳು ಯಶಸ್ವಿಯಾಗಿ ನಡೆಯುತ್ತಿದೆ.

ನಮ್ಮ ಸಂಸ್ಥೆಯ ಸಮಾಜಮುಖಿ ಚಟುವಟಿಕೆಗಳನ್ನು ಉತ್ತೇಜಿಸುವ ದೃಷ್ಟಿಯಿಂದ ಕನ್ಯಾಡಿಯಲ್ಲಿ 2023ನೇ ವರ್ಷದಲ್ಲಿ ಸರ್ಕಾರವು ಒಟ್ಟು 10 ಸೆಂಟ್ಸ್ ಜಮೀನನ್ನು ನಮ್ಮ ಸಂಸ್ಥೆಯ ಕಟ್ಟಡ ನಿರ್ಮಾಣ ಉದ್ದೇಶಕ್ಕಾಗಿ ಮಂಜೂರುಗೊಳಿಸಿದೆ. ಪ್ರಸಕ್ತ ವರ್ಷದಲ್ಲಿ ಸೇವಾಭಾರತಿಯ ಕಾರ್ಯಚಟುವಟಿಕೆಗಳಿಗೆ ಹಾಗೂ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗಾಗಿ ಪುನಶ್ಚೇತನ ಕೇಂದ್ರದ ಉದ್ದೇಶಕ್ಕಾಗಿ ಕಟ್ಟಡ ನಿರ್ಮಾಣಕ್ಕೆ ಮುಂದಾಗಿದ್ದೇವೆ. ಅಲ್ಲದೆ ಧನಸಹಾಯ ನೀಡುವಂತೆ ಬೇರೆ ಬೇರೆ ಸಂಸ್ಥೆಗಳಿಗೆ ಮನವಿಯನ್ನೂ ಮಾಡಿದ್ದೇವೆ. ಈ ಮನವಿಗೆ ಸ್ಪಂದಿಸಿ ಮುಂಬರುವ ದಿನಗಳಲ್ಲಿ ಕಿಂಚಿತ್ತಾದರೂ ಸಿಗಬಹುದೆಂಬ ಆಶಾವಾದದಲ್ಲಿ ನಾವಿದ್ದೇವೆ. ನಮ್ಮ ಸಂಸ್ಥೆಯ ಕಟ್ಟಡದ ನಿರ್ಮಾಣಕ್ಕಾಗಿ ಒಟ್ಟು ಮೊತ್ತ ರೂ 3,05,72,580/– ಅಂದಾಜಿಸಲಾಗಿದ್ದು, ಇದರ ಮೊದಲ ಹಂತವಾಗಿ ನೆಲಮಹಡಿಗೆ ಮಂಗಳೂರಿನ Mangalore Refinery and petrochemicals Limited (MRPL) ನಿಂದ ರೂಪಾಯಿ 42 ಲಕ್ಷದಷ್ಟು ಮಂಜೂರಾಗಿದ್ದು ಒಂದು ವರ್ಷದ ಅವಧಿಯೊಳಗೆ ನಿರ್ಮಾಣ ಮಾಡಬೇಕಾಗಿದೆ. ಆದರೆ ಅಡಿಪಾಯ ಬೇಸ್ಮೆಂಟ್‌ನಲ್ಲಿ ಶೌಚಾಲಯ, ಒಂದು ಸೆಕ್ಯೂರಿಟಿ ರೂಮ್, ಸಂಪು ಹಾಗೂ ಪಾರ್ಕಿಂಗ್ ವ್ಯವಸ್ಥೆಗಳನ್ನು ನಿರ್ಮಾಣ ಮಾಡಬೇಕಿದೆ. ಇದಕ್ಕಾಗಿ ಒಟ್ಟು 60 ಲಕ್ಷ ರೂಪಾಯಿಗಳಷ್ಟು ವೆಚ್ಚವಾಗಲಿದೆ.

**ಒಟ್ಟು ಮೊತ್ತ ರೂ.3,05,72,580/– ಅಂದಾಜಿಸಲಾಗಿದ್ದು, ಇದರ ನೆಲಮಹಡಿಗೆ ಮಂಗಳೂರಿನ MRPL 42 ಲಕ್ಷದಷ್ಟು ನೀಡಲಿದೆ.**

ಈವರೆಗೂ ತಾವು ನಮ್ಮ ಎಲ್ಲಾ ಯೋಜನೆಗಳಿಗೂ ಕೈಲಾದಷ್ಟು ಸಹಾಯ ನೀಡುತ್ತಿದ್ದು, ಈ ಬಾರಿ ಈ ಕಟ್ಟಡ ಕಟ್ಟಲು ಸಹಾಯ ನೀಡುವಿರೆಂದು ಭಾವಿಸಿದ್ದೇವೆ. ಈ ಕಟ್ಟಡವು ನಿರ್ಮಾಣಗೊಂಡು ಕಾರ್ಯಾಚರಿಸಲು ಪ್ರಾರಂಭಿಸಿದ್ದಲ್ಲಿ ರಾಜ್ಯದಾದ್ಯಂತವಿರುವ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಆಶಾಕಿರಣವಾಗಿ ಮಾದರಿಯಾದ ಪುನಶ್ಚೇತನ ಕೇಂದ್ರವಾಗುವುದರಲ್ಲಿ ಸಂಶಯವಿರುವುದಿಲ್ಲ. ಆದಕಾರಣ ನಮ್ಮ ಸಂಸ್ಥೆಗೆ ಧನಸಹಾಯ ನೀಡಿ ಈ ಯೋಜನೆಯನ್ನು ಯಶಸ್ವಿ–ಗೊಳಿಸಿಕೊಡಬೇಕೆಂದು ತಮ್ಮಲ್ಲಿ ಮತ್ತೊಮ್ಮೆ ಕಳಕಳಿಯ ವಿನಂತಿ.

### BANK ACCOUNT DETAILS

SEVABHARATHI REGD

237887292400920@cnrb

Scan & Pay also

| | | |
|---|---|---|
| A/c Name | : | Sevabharathi |
| Current A/c No | : | 120000400920 |
| IFSC | : | CNRB0010246 |

Canara Bank, Dharmasthala Branch

## ಸೇವಾಭಾರತಿಯ ವಿಶ್ವಸ್ಥ ಮಂಡಳಿಗೆ ನೂತನ ಟ್ರಸ್ಟಿಗಳು



### ಜಯರಾಜ್ ಸಾಲ್ಯಾನ್ ಕಾನರ್ಪ

ಕಡಿರುದ್ಯಾವರ ಗ್ರಾಮದ ಕಾನರ್ಪ ನಿವಾಸಿಯಾಗಿರುವ ಜಯರಾಜ್ ಸಾಲ್ಯಾನ್ ಕಾನರ್ಪ ಇವರು ಹಲವಾರು ಸಾಮಾಜಿಕ ಸಂಘಟನೆಗಳಲ್ಲಿ ತಮ್ಮನ್ನು ತಾವು ತೊಡಗಿಸಿ–ಕೊಂಡು ಸೇವೆಯನ್ನು ಸಲ್ಲಿಸುತ್ತಿದ್ದು, ವೃತ್ತಿಯಲ್ಲಿ ಕನ್‌ಸ್ಟ್ರಕ್ಷನ್ ಗುತ್ತಿಗೆದಾರರು, ಕೃಷಿಕರು ಆಗಿದ್ದು ಕಡಿರುದ್ಯಾವರ ಗ್ರಾಮದ ಚಿರಂಜೀವಿ ಯುವಕ ಮಂಡಲದಲ್ಲಿ ಅಧ್ಯಕ್ಷರಾಗಿ, ಸಂಚಾಲಕರಾಗಿ ಸೇವೆಯನ್ನು ಸಲ್ಲಿಸಿದ್ದು ಈಗಲೂ ಯುವಕ ಮಂಡಲದಲ್ಲಿ ಸಕ್ರಿಯ ಸದಸ್ಯರಾಗಿದ್ದಾರೆ. ಹಲವಾರು ಸಾಮಾಜಿಕ ಹೋರಾಟಗಳಲ್ಲೂ ಇವರು ಭಾಗವಹಿಸಿದ್ದಾರೆ.

2018 ರಲ್ಲಿ ಭಾರತೀಯ ಮಜ್ದೂರ್ ಸಂಘದ ರಾಜ್ಯ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದು, 2024 ಫೆಬ್ರವರಿಯಲ್ಲಿ ಬಳ್ಳಾರಿಯಲಿ ನಡೆದ ಮಜ್ದೂರ್ ಸಂಘದ 22ನೇ ತ್ರೈವಾರ್ಷಿಕ ಅಧಿವೇಶನದಲ್ಲಿ ಭಾರತೀಯ ಮಜ್ದೂರ್ ಸಂಘದ ರಾಜ್ಯ ಕಾರ್ಯದರ್ಶಿಯಾಗಿ ಪುನರಾಯ್ಕೆ ಆಗಿರುತ್ತಾರೆ.



### ಪೃಥ್ವಿಶ್ ಧರ್ಮಸ್ಥಳ

ಧರ್ಮಸ್ಥಳದ ನಿವಾಸಿಯಾಗಿ–ರುವ ಪೃಥ್ವಿಶ್ ಧರ್ಮಸ್ಥಳ ಉಜಿರೆ SDM ಕಾಲೇಜಿನಲ್ಲಿ BCA ಪದವಿ–ಯನ್ನು ಪಡೆದು ತದನಂತರ ಮಂಗಳೂರು SDM ಕಾನೂನು ಕಾಲೇಜಿನಲ್ಲಿ ಕಾನೂನು ಪದವಿ ಯನ್ನು ಮುಗಿಸಿ KSOU ನಲ್ಲಿ M.A in History ಪದವಿ ಪೂರ್ಣಗೊಂಡಿರುತ್ತಾರೆ. 10 ವರ್ಷಗಳಿಂದ ಸಂಘದ ಸ್ವಯಂಸೇವಕರಾಗಿ, ತುಮಕೂರಿನಲ್ಲಿ ಸಂಘದ ವಿಸ್ತಾರಕನಾಗಿ, ಯುವ ಸ್ಪಂದನ ಸೇವಾ ಸಹಕಾರಿ ಮತ್ತು ಅಭಿವೃದ್ಧಿ ಸಂಸ್ಥೆಯ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದಾರೆ. ಪ್ರಸ್ತುತ ಇದೀಗ ಮಂಗಳೂರಿನಲ್ಲಿ ವಕೀಲ ವೃತ್ತಿಯಲ್ಲಿ ಕೆಲಸ ಮಾಡುತ್ತಿದ್ದಾರೆ.

*When everyone else says you can't determination says, YES YOU CAN'*

# ದ.ಕ. ಜಿಲ್ಲೆಯ MRW ಮತ್ತು VRW ಗಳಿಗೆ ಬೆನ್ನುಹುರಿ ಅಪಘಾತದ ಬಗ್ಗೆ ಜಾಗೃತಿ ಕಾರ್ಯಗಾರ






ಬೆನ್ನುಹುರಿ ಅಪಘಾತ ಮತ್ತು ದ್ವಿತೀಯಾಂತರ ಸಮಸ್ಯೆಗಳು ಹಾಗೂ ಬೆನ್ನುಹುರಿ ಅಪಘಾತ ತಡೆಯಲು ಮುನ್ನೆಚ್ಚರಿಕೆ ಕ್ರಮ ಮತ್ತು ಮರ ಹತ್ತುವಾಗ ಮುಂಜಾಗ್ರತಾ ಕ್ರಮವನ್ನು ತೆಗೆದುಕೊಳ್ಳುವುದರ ಬಗ್ಗೆ ದಕ್ಷಿಣ ಕನ್ನಡ ಜಿಲ್ಲೆಯ 156 ಮಂದಿ MRW ಮತ್ತು VRW ಗೆ ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಯ ಕ್ಷೇತ್ರ ಸಂಯೋಜಕರಾದ ಶ್ರೀ ಕುಸುಮಾಧರ ಮಾಹಿತಿಯಿತ್ತರು.

# ಸೇವಾಧಾಮದಲ್ಲಿ ಪುನಶ್ಚೇತನಗೊಂಡ ಸನಿವಾಸಿಗಳ ಅನಿಸಿಕೆ

ನಾನು ಶೇಖರಗೌಡ ಎಸ್.ಕೆ. ಕಡಬ ತಾಲೂಕು ಆಲಂಕಾರ್ ಗ್ರಾಮದ ಶರವೂರು ನಿವಾಸಿಯಾಗಿದ್ದು ನಾನು ತಾರೀಕು 12–05–2024 ರಂದು ಸಾಯಂಕಾಲ ಮನೆಯ ಸ್ಲ್ಯಾಪಿನಿಂದ ಕೆಳಗೆ ಬಿದ್ದಿರುತ್ತೇನೆ. ತಕ್ಷಣ ನನ್ನನ್ನು ನನ್ನ ಅಣ್ಣ ಮತ್ತು ತಮ್ಮಂದಿರು ಪುತ್ತೂರಿನ ಮಹಾವೀರ ಆಸ್ಪತ್ರೆಗೆ ಸೇರಿಸಿರುತ್ತಾರೆ. ಅಲ್ಲಿನ ಡಾಕ್ಟರ್‌ನವರು ಪರಿಶೀಲಿಸಿ ನನಗೆ ಎಂಆರ್‌ಐ ಸ್ಕ್ಯಾನಿಂಗ್ ಮಾಡಿರುತ್ತಾರೆ. ಹೆಚ್ಚಿನ ಚಿಕಿತ್ಸೆಗೆ ಮಂಗಳೂರಿನ ಕೆಎಂಸಿ ಅತ್ತಾವರಕ್ಕೆ ಕಳುಹಿಸಿಕೊಟ್ಟಿರುತ್ತಾರೆ. ಅಲ್ಲಿ ಮೂರು ದಿವಸ ಚಿಕಿತ್ಸೆ ಮಾಡಿ ನಾಲ್ಕನೇ ದಿವಸ ಕುತ್ತಿಗೆಯ ಸರ್ಜರಿ ಮಾಡಿರುತ್ತಾರೆ. ಒಂದು ದಿವಸ ICU ನಲ್ಲಿ ಇದ್ದು ಮರುದಿವಸ ವಾರ್ಡಿಗೆ ಸೇರಿಸಿದ್ದಾರೆ ಅಲ್ಲಿ 20 ದಿವಸ ಚಿಕಿತ್ಸೆ ಪಡೆದು ಒಂದು ತಿಂಗಳು ಮನೆಯಲ್ಲಿ ವಿಶ್ರಾಂತಿ ಪಡೆದು ನಂತರ ಚೆಸ್ಟಿಗೆ ಬರಲು ಹೇಳಿದರು. ಅಲ್ಲಿ 10 ದಿವಸ ಇದ್ದು ಥೆರಪಿ ತೆಗೆದುಕೊಂಡ ನಂತರ ಅಲ್ಲಿಂದ ಡಿಸ್ಚಾರ್ಜ್ ಆಗಿ ಮನೆಗೆ ಬಂದೆವು.

ನಂತರ 25 ದಿವಸ ಮನೆಯಲ್ಲಿ ಒಂದು ಗಂಟೆಯ ತೆರಪಿ ಮಾಡಿಸುತ್ತ ಚೇತರಿಸಿಕೊಳ್ಳುತ್ತಿದ್ದೆ. ನಂತರ ಡಾ. ವೈಶಾಖ್ ಸರ್ ಮುಖಾಂತರ 30–10–2024 ರಂದು ಕೊಕ್ಕಡದ ಸೇವಾಧಾಮ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರಕ್ಕೆ ಬಂದೆವು. ನನಗೆ ಬರುವಾಗ ಸರಿಯಾಗಿ ನಡೆದಾಡಲು ಆಗುತ್ತಿರಲಿಲ್ಲ ಇಲ್ಲಿಗೆ ಬಂದ ನಂತರ ಬಹಳಷ್ಟು ನಾನು ಚೇತರಿಸಿಕೊಂಡಿದ್ದೇನೆ. ನಾನೇ ಊಟ ಮಾಡಿಕೊಳ್ಳುತ್ತೇನೆ.

ಗಣೇಶ್ ಸರ್ ಮತ್ತು ವಿರೂಪಾಕ್ಷ ಸರ್, ಕೃತಿಕಾ ಮೇಡಂ ಇವರೆಲ್ಲರೂ ತುಂಬಾ ಪ್ರಯತ್ನ ಪಟ್ಟಿರುತ್ತಾರೆ. ಮತ್ತು ಅಕ್ಷತಾ ಮೇಡಂ ಹಾಗೂ ಸೇವಾಭಾರತೀಯ ಎಲ್ಲಾ ಸಿಬ್ಬಂದಿಯವರಿಗೆ ಹಾಗೂ ವಿನಾಯಕ ಸರ್, ಕುಸುಮಾಧರ್ ಸರ್ ಇರೆಲ್ಲರಿಗೂ ತುಂಬು ಹೃದಯದ ಧನ್ಯವಾದಗಳು.

ಇತಿ ನಿಮ್ಮ ವಿಶ್ವಾಸಿ

**ಶೇಖರ ಗೌಡ ಎಸ್.ಕೆ, ಕಡಬ**

## ಮಾರ್ಚ್ ತಿಂಗಳ ಸೇವಾ ಕಾರ್ಯಗಳು

| | | |
|---|---|---|
| 1. | ಗಾಲಿಕುರ್ಚಿ | – 12 |
| 2. | ನೀರಿನ ಹಾಸಿಗೆ | – 2 |
| 3. | ಸೆಲ್ಫ್‌ಕೇರ್ ಕಿಟ್ ಮತ್ತು ಮೆಡಿಕಲ್ ಕಿಟ್ | – 36 |

## ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ 2 ತಿಂಗಳ ಪುನಶ್ಚೇತನವನ್ನು ಪಡೆದುಕೊಂಡು ಮಾರ್ಚ್ ತಿಂಗಳಲ್ಲಿ ಡಿಸ್ಚಾರ್ಜ್ ಆದವರು





ಶ್ರೀ ಕೊರಗಪ್ಪ ಕುಂಬಾರ, ಇಳಂತಿಲ

*Once you choose hope, anything's possible*

# APD ಯ ಸಹಕಾರದೊಂದಿಗೆ ರಿಯಾಯಿತಿ ದರದಲ್ಲಿ ಗಾಲಿಕುರ್ಚಿ ವಿತರಣೆ



ಶ್ರೀ ವಾಸುದೇವ ಬಿಳಿನೆಲೆ
ಕಡಬ



ಶ್ರೀ ಯತೀಶ್ ಪಿ,
ಕನಕಮಜಲು



ಶ್ರೀ ಪ್ರಕಾಶ್ ಬಿ.ಕೆ,
ಸೋಮವಾರಪೇಟೆ



ಶ್ರೀ ಜಗದೀಶ್ ದುದ್ದ
ಹಾಸನ



ಶ್ರೀ ಜಾಯ್ಸ್ ಎಂ.ಎಸ್.
ಎನ್.ಆರ್. ಪುರ



ಶ್ರೀ ಪ್ರದೀಪ್
ಬೀಗನಹಳ್ಳಿ



ಶ್ರೀ ನಂದನ್ ಸಾಲೂರು,
ಎನ್.ಆರ್.ಪುರ



ಶ್ರೀ ಆನಂದ ಎಸ್,
ತೀರ್ಥಹಳ್ಳಿ



ಶ್ರೀ ಜಗದೀಶ್ ಎಲ್,
ತೀರ್ಥಹಳ್ಳಿ



ಶ್ರೀ ವಿಶ್ವನಾಥ ಮಹಾಬಲೇಶ್ವರ ಹೆಗ್ಡೆ
ಸಿದ್ದಾಪುರ



ಶ್ರೀಮತಿ ಕುಮಾರಿ
ಮಾದೇವ ಹರಿಕಾಂತ್, ಕುಮಟಾ



ಶ್ರೀ ರಾಕೇಶ್ ಸಿ.ಎಂ,
ಚಿಕ್ಕನಾಯಕನಹಳ್ಳಿ

# ತಮ್ಮ ವಿಶೇಷ ದಿನವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಿ ಮಾದರಿಯಾದವರು




ಸೇವಾಧಾಮದಲ್ಲಿ ಪುನಶ್ಚೇತನ ಪಡೆಯುತ್ತಿರುವ ದಿವ್ಯಾಂಗರಿಗೆ ಒಂದು ಹೊತ್ತಿನ ಊಟಕ್ಕಾಗಿ ದೇಣಿಗೆಯನ್ನು ನೀಡುವ ಮೂಲಕ ತಮ್ಮ ವಿಶೇಷ ದಿನವನ್ನು ಆಚರಿಸಿ ಎಲ್ಲರಿಗೂ ಮಾದರಿಯಾಗಿದ್ದೀರಿ. ತಮ್ಮ ಈ ಸೇವಾಕಾರ್ಯಕ್ಕೆ ಕೃತಜ್ಞತೆಗಳು...





ಕು। ಬಿಂದ್ಯಾ
ಪುತ್ತೂರು




ಶ್ರೀ ಹರೀಶ್ ಟಿ.ಪಿ,
ಬೆಂಗಳೂರು



ಶ್ರೀ ಜನಾರ್ಧನ್,
ಮೂಡಿಗೆರೆ



ರೋ। ಪ್ರಭಾಕರನ್ ನಾಯರ್
ಸುಳ್ಯ



ಡಾ। ಉದಯಶಂಕರ್ ಎಚ್.ಜಿ,
ಕೊಪ್ಪ



ರೋ। ರಾಮಚಂದ್ರ ರಾವ್
ಸುಳ್ಯ



ಶ್ರೀ ಸುರೇಂದ್ರ ಕುಡುವ,
ಉಜಿರೆ



ಶ್ರೀ ಚಂದ್ರಶೇಖರ ಎಂ. ಪೂಜಾರಿ,
ಶಿರಸಿ



ಶ್ರೀ ಶ್ರೀರಾಮ್
ಬೆಳ್ತಂಗಡಿ




ಕು। ಸಮೀಕ್ಷಾ
ಅಳದಂಗಡಿ



ಶ್ರೀ ಪ್ರದೀಪ್ ಮತ್ತು ಶ್ರೀಮತಿ ಸ್ವಾತಿ,
ವೇಣೂರು



ಶ್ರೀ ರಾಜಾರಾಮ್ ಕಾರಂತ್,
ಬೆಂಗಳೂರು



ಶ್ರೀ ಲಕ್ಷ್ಮಿನಾರಾಯಣ ರಾವ್,
ಧರ್ಮಸ್ಥಳ



ಬೇಬಿ ನಮಿತಾ ಕೆ.ಎಲ್,
ಸೋಮವಾರಪೇಟೆ



ಶ್ರೀ ಆಶ್ರಿತ್ ಸಿ.ಪಿ.
ಉಜಿರೆ

## ನಿಮಗಿದು ತಿಳಿದಿರಲಿ

# ಬೆನ್ನು ಮೂಳೆಯ ಅಗತ್ಯ ಮತ್ತು ಉಪಯೋಗ

ಬೆನ್ನು ಮೂಳೆಯು ನಮ್ಮನ್ನು ಎತ್ತರವಾಗಿ ನಿಲ್ಲುವಂತೆ ಮಾಡುವ ಮತ್ತು ಚಲಿಸಲು, ಕುಳಿತು ಕೊಳ್ಳಲು ಮತ್ತು ಬಾಗಲು ಅನುವು ಮಾಡಿಕೊಡುವ ಬಲವಾದ ಸ್ತಂಭದಂತಿದೆ. ಇದನ್ನು ಬಲವಾದ, ಹೊಂದಿಕೊಳ್ಳುವ ಬ್ಯಾಂಡ್‌ಗಳಿಂದ (ಲಿಗಮೆಂಟ್‌ಗಳು) ಸಂಪರ್ಕಗೊಂಡಿರುವ ಮತ್ತು ಮೃದುವಾದ ಪ್ಯಾಡ್‌ಗಳಿಂದ (ಡಿಸ್ಕ್‌ಗಳು) ಮೆತ್ತನೆಯಿರುವ ಬಿಲ್ಡಿಂಗ್ ಗ್ಲಾಬ್‌ಗಳ (ಕಶೇರು ಖಂಡಗಳು) ರಾಶಿಯಾಗಿ ಕಲ್ಪಿಸಿಕೊಳ್ಳಿ. ಈ ರಚನೆಯು ನಾವು ನೇರವಾಗಿರಲು ಸಹಾಯ ಮಾಡುವುದಲ್ಲದೆ, ನಮ್ಮ ದೇಹದ ತೂಕವನ್ನು ಬೆಂಬಲಿಸುತ್ತದೆ ಮತ್ತು ನಮಗೆ ಆಕಾರವನ್ನು ನೀಡುತ್ತದೆ.

ಆದರೆ ಬೆನ್ನುಮೂಳೆಯು ನಮ್ಮನ್ನು ಎತ್ತಿಹಿಡಿಯುವುದಕ್ಕಿಂತ ಹೆಚ್ಚಿನದನ್ನು ಮಾಡುತ್ತದೆ. ಇದು ಮಾಹಿತಿಗಾಗಿ ಒಂದು ಹೆದ್ದಾರಿಯೂ ಆಗಿದೆ. ಬೆನ್ನುಹುರಿಯ ನರಗಳು ನಮ್ಮ ಮೆದುಳು ಮತ್ತು ನಮ್ಮ ದೇಹದ ಉಳಿದ ಭಾಗಗಳ ನಡುವೆ ಸಂದೇಶಗಳನ್ನು ಸಾಗಿಸುವ ತಂತಿಗಳ ಕಟ್ಟುಗಳಂತೆ. ಉದಾಹರಣೆಗೆ, ನೀವು ನಿಮ್ಮ ತೋಳನ್ನು ಚಲಿಸಲು ಬಯಸಿದಾಗ, ನಿಮ್ಮ ಮೆದುಳು ಬೆನ್ನುಹುರಿಯ ಮೂಲಕ ನಿಮ್ಮ ತೋಳಿನ ನರಗಳಿಗೆ ಸಂಕೇತವನ್ನು ಕಳುಹಿಸುತ್ತದೆ, ಅದು ಏನು ಮಾಡಬೇಕೆಂದು ಹೇಳುತ್ತದೆ. ಈ ನರಗಳು ನಿಮಗೆ ವಿಷಯಗಳನ್ನು ಅನುಭವಿಸಲು ಸಹ ಸಹಾಯ ಮಾಡುತ್ತದೆ – ನೀವು ಬಿಸಿಯಾದ ಏನನ್ನಾದರೂ ಮುಟ್ಟಿದಾಗ, ಸಂದೇಶವು ನಿಮ್ಮ ಬೆನ್ನುಹುರಿಯ ಮೂಲಕ ನಿಮ್ಮ ಮೆದುಳಿಗೆ ಹೋಗುತ್ತದೆ, ಅದು ನಿಮ್ಮನ್ನು ಸುಟ್ಟು ಹೋಗುವ ಮೊದಲು ದೂರ ಸರಿಯುವಂತೆ ತ್ವರಿತವಾಗಿ ಹೇಳುತ್ತದೆ!

## ನಮ್ಮ ಯೋಜನೆಗಳು

**ಆರೋಗ್ಯಮ್** : ರಕ್ತದಾನ ಶಿಬಿರಗಳ ಆಯೋಜನೆ ಮತ್ತು ಆ್ಯಂಬುಲೆನ್ಸ್ ಸೇವೆಗಳು.

**ಸಬಲಿನಿ** : ಮಹಿಳಾ ಸ್ವಾವಲಂಬನಕ್ಕಾಗಿ ವೃತ್ತಿ ತರಬೇತಿ.

**ಸೇವಾಧಾಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಪುನಶ್ಚೇತನ ಕೇಂದ್ರ.

**ಸೇವಾಪಥ** : ಮಾಸಿಕ ಈ–ನ್ಯೂಸ್ ಲೆಟರ್ .

**ಸೇವಾ ಸಂಗಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಆನ್‌ಲೈನ್ ಮೂಲಕ ಸಂಬಂಧಿತ ತಜ್ಞರಿಂದ ಮಾಹಿತಿ, ತರಬೇತಿ ಹಾಗೂ ಮಾರ್ಗದರ್ಶನ.

**ಆರೋಗ್ಯ ಬಿಂದು**: ಫಲಾನುಭವಿಗಳಿಗೆ ಕನಿಷ್ಠ ದರದಲ್ಲಿ ಸೆಲ್ಫ್‌ಕೇರ್ & ಮೆಡಿಕಲ್ ಕಿಟ್‌ಗಳು

## ತಾವು ಹೀಗೂ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಬಹುದಾಗಿದೆ

### ಸಂಸ್ಥೆಗೆ ದೇಣಿಗೆ ಮೂಲಕ ಸಹಕಾರ

| | |
|---|---|
| ರೂ. 2000/– | ನೀಡುವುದರ ಮೂಲಕ ಒಟ್ಟು ಫಲಾನುಭವಿಯ ಒಂದು ತಿಂಗಳ ಮೆಡಿಕಲ್ ಕಿಟ್‌ಗಳಿಗಾಗಿ ಸಹಕಾರ. |
| ರೂ. 6000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಗಾಗಿ ಸಹಕಾರ |
| ರೂ. 4500/– | ನೀಡುವುದರ ಮೂಲಕ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಯ ಸಂದರ್ಭ ಪೋಷಕರಿಗಾಗಿ ಸಹಕಾರ |
| ರೂ. 3000/– | ನೀಡುವುದರ ಮೂಲಕ ಸೇವಾಧಾಮದಲ್ಲಿ ಒಂದು ಹೊತ್ತಿನ ಊಟೋಪಚಾರಕ್ಕೆ ಸಹಕಾರ |
| ರೂ. 10000/– | ನೀಡುವುದರ ಮೂಲಕ ಸಮುದಾಯ ಭೇಟಿಗಾಗಿ ಸಹಕಾರ |
| ರೂ. 15000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಗಳಿಗೆ ಒಂದು ಗಾಲಿಕುರ್ಚಿಯ ಕೊಡುಗೆ |
| ರೂ. 10000/– | ನೀಡುವುದರ ಮೂಲಕ ಕೇಂದ್ರದಲ್ಲಿ ಹುಟ್ಟು ಹಬ್ಬದ ಆಚರಣೆ ಮಾಡುವುದು |

## DONATE & JOIN US IN OUR MISSION

A/c Holder - M/s. Sevabharathi(R)
A/c No - 01682200072637
IFS Code - CNRB0010168
Bank - Canara Bank, Kokkada Branch

## Support us for constructions of Rehabilitation Centre

A/c Name : Sevabharathi
A/c No : 139322010000383
IFSC : UBIN0913936
Account Type : Savings Account
Union Bank of India, UJIRE Branch

*We are put in situations to build our character... not destroy us*

# ಬೆನ್ನುಹುರಿ ಅಪಘಾತಕ್ಕೊಳಗಾಗಿದ್ದರೂ ಮಲ್ಲಿಗೆ ವ್ಯಾಪಾರದಲ್ಲಿ ಜೀವನವನ್ನು ರೂಪಿಸಿಕೊಂಡ ಶೇಖರ್ ಬೈಪಾಡಿಯವರ ಯಶೋಗಾಥೆ





ಶೇಖರ್ ಬೈಪಾಡಿ ಇವರು ಮೂಲತಃ ಬೈಪಾಡಿ, ಬಂದಾರು ಗ್ರಾಮದ ನಿವಾಸಿಯಾಗಿದ್ದು, ಮಾರ್ಚ್ 1983, ರಲ್ಲಿ ದಿ. ವೀರಪ್ಪ ಗೌಡ ಮತ್ತು ಶ್ರೀಮತಿ ರಾಮಕ್ಕ ದಂಪತಿಯ ಪಂಚಮಪುತ್ರನಾಗಿ ಜನಿಸಿದರು. ಕೊಯ್ಯೂರು ಆದೂರ್ ಪೇರಾಲ್ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ತದನಂತರ ಪ್ರೌಢಶಿಕ್ಷಣವನ್ನು ಮಂಗಳೂರಿನ ನವಭಾರತ್ ಶಾಲೆಯಲ್ಲಿ ಪೂರ್ಣಗೊಳಿಸಿದರು. ಬಡತನದಲ್ಲಿದ್ದ ಶೇಖರ್‌ರವರು ಹೆಚ್ಚಿನ ಶಿಕ್ಷಣವನ್ನು ಮುಂದುವರಿಸಲು ಸಾಧ್ಯವಾಗದೆ ತನ್ನ ಆಸೆಯನ್ನೇ ಕೈಬಿಟ್ಟರು. ಅದೇ ಸಮಯದಲ್ಲಿ ತಂದೆಯ ಅಕಾಲಿಕ ಮರಣ ಅವರನ್ನು ಇನ್ನಷ್ಟು ಘಾಸಿಗೊಳಿಸಿತು. ನಂತರದ ಜೀವನವನ್ನು ಸಾಗಿಸಲು ಮಂಗಳೂರಿನಲ್ಲಿ ಹೋಟೆಲ್ ಕೆಲಸಕ್ಕೆ ಸೇರಿಕೊಂಡರು. ನಂತರ ಮನೆಯಲ್ಲಿಯೇ ಕೃಷಿ ಕೆಲಸವನ್ನು ಮಾಡುತ್ತಾ, ಆಟೋ ಚಲಾಯಿಸುತ್ತ ಮತ್ತು ಮಲ್ಲಿಗೆ ವ್ಯಾಪಾರವನ್ನು ಮಾಡುತ್ತ ಜೀವನವನ್ನು ಸಾಗಿಸುತ್ತಿದ್ದರು. ನಂತರ 2012 ರಲ್ಲಿ ಶ್ರೀಮತಿ ಭಾಗ್ಯಶ್ರೀ ಅವರ ಜೊತೆ ವೈವಾಹಿಕ ಜೀವನಕ್ಕೆ ಕಾಲಿಟ್ಟರು. ಅದೇ ವರ್ಷದಲ್ಲಿ ಪಿಕಪ್ ತೆಗೆದು ತನ್ನ ಜೀವನದ ವೃತ್ತಿಯನ್ನು ಪ್ರಾರಂಭಿಸಿದ್ದರು. 2014 ರಲ್ಲಿ ಪುತ್ರಿಗೂ ಜನ್ಮವಿತ್ತರು. ಕಷ್ಟಸುಖಗಳನ್ನು ಸಂಭಾಳಿಸಿಕೊಂಡು ಹೋಗುತ್ತಿದ್ದ ದಿನಗಳಲ್ಲಿ ಸಂಸಾರದೊಂದಿಗೆ ಅನ್ಯೋನ್ಯವಾಗಿ ಕಾಲ ಕಳೆಯುತ್ತಿದ್ದರು. ಆದರೆ ವಿಧಿಯ ಆಟ ಬೇರೆಯೇ ಇತ್ತು.

ಹೀಗೆ ಜೀವನ ಸಾಗಿಸುತ್ತಿದ್ದ ಸಂದರ್ಭದಲ್ಲಿ 2015 ಮಾರ್ಚ್ 28 ರಂದು ಪಿಕಪ್ ಪಲ್ಟಿ ಆಗಿ ಅಪಘಾತಕ್ಕೆ ಒಳಗಾದರು. ತದನಂತರ ಪ್ರಾಥಮಿಕ ಚಿಕಿತ್ಸೆಯನ್ನು ಉಜಿರೆಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ (SDM) ಆಸ್ಪತ್ರೆಯಲ್ಲಿ ಪಡೆದುಕೊಂಡರು. ಮುಂದಿನ ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ಕೆ.ಎಂ.ಸಿ ಅತ್ತಾವರ ಆಸ್ಪತ್ರೆಗೆ ಬಂದರು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಸಂದರ್ಭದಲ್ಲಿ ಅವರಿಗೆ ಬೆನ್ನುಹುರಿ ಅಪಘಾತದ ಬಗ್ಗೆ ವಿಷಯ ತಿಳಿಸಿದರು. ಇನ್ನು ಮುಂದೆ ನಡೆದಾಡಲು ಸಾಧ್ಯವಿಲ್ಲ ಹಾಗೂ ಗಾಲಿಕುರ್ಚಿಯ ಮುಖಾಂತರ ಮಾತ್ರ ಚಲಿಸಲು ಸಾಧ್ಯವೆಂದು ಮನವರಿಕೆ ಮಾಡಿದರು. ಆಸ್ಪತ್ರೆಯಲ್ಲಿಯೇ ಇದ್ದು ಚಿಕಿತ್ಸೆಯನ್ನು ಪಡೆದುಕೊಂಡರು. ಚಿಕಿತ್ಸೆಯನ್ನು ಪಡೆದ ನಂತರ 1 ವರ್ಷಗಳ ಕಾಲ ಮಲಗಿದಲ್ಲೇ ತನ್ನ ಜೀವನವನ್ನು ಕಳೆದರು. ನಂತರ SDM ನ ಉದ್ಯಾವರದಲ್ಲಿ ಆಯುರ್ವೇದಿಕ್ ಚಿಕಿತ್ಸೆಯನ್ನು ಪಡೆದುಕೊಂಡರು. ತದನಂತರ ಮಲ್ಲಿಕಟ್ಟೆಯ ಸಂಜೀವಿನಿಯಲ್ಲಿ ಚಿಕಿತ್ಸೆಯನ್ನು ಮಾಡಿದರು. ನೆಲ್ಯಾಡಿ, ಬಲ್ಯದಲ್ಲಿ ಹೀಗೆ 4–5 ಕಡೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡರು. ಸ್ವಲ್ಪ ಚೇತರಿಸಿಕೊಳ್ಳುತ್ತ ಜೀವನವನ್ನು ಗಾಲಿಕುರ್ಚಿಯಲ್ಲಿಯೇ ಸಾಗಿಸುತ್ತಿದ್ದರು. ನಂತರ ಸೇವಾಭಾರತಿಯ ಕ್ಷೇತ್ರ ಸಂಯೋಜಕರು ಶೇಖರ್ ಮನೆಗೆ ಭೇಟಿನೀಡಿ ಆರೋಗ್ಯದ ಬಗ್ಗೆ ಮಾಹಿತಿಯನ್ನು ಪಡೆದುಕೊಂಡರು. ನಂತರ ಸೇವಾಭಾರತಿ/ ಸೇವಾಧಾಮದ ಮಾಹಿತಿಯನ್ನು ಪಡೆದುಕೊಂಡು ಶ್ರೀ ಕೆ. ವಿನಾಯಕ ರಾವ್‌ರವರ ಪರಿಚಯ ಮಾಡಿಕೊಂಡು ಸೇವಾಧಾಮಕ್ಕೆ ಭೇಟಿ ನೀಡಿದರು. ಸುಮಾರು 10 ದಿನಗಳ ಕಾಲ ಸೇವಾಧಾಮದಲ್ಲಿ ಇದ್ದು ಚಿಕಿತ್ಸೆಯನ್ನು ಪಡೆದುಕೊಂಡು ಸೇವಾಭಾರತಿಯಿಂದ ಗಾಲಿಕುರ್ಚಿ, ಸೆಲ್ಫ್‌ಕೇರ್ ಕಿಟ್ ಮತ್ತು ಮೆಡಿಕಲ್ ಕಿಟ್ ಸೌಲಭ್ಯ ಪಡೆದುಕೊಂಡು ಪ್ರಸ್ತುತ ಇದೀಗ ಮಲ್ಲಿಗೆ ವ್ಯಾಪಾರವನ್ನು ಮಾಡುತ್ತಿದ್ದಾರೆ. 2012 ರಲ್ಲಿ ಮಲ್ಲಿಗೆ ವ್ಯಾಪಾರವನ್ನು ಪ್ರಾರಂಭಿಸಿದ್ದ ಇವರು 2015 ರಲ್ಲಿ ರಸ್ತೆ ಅಪಘಾತದಿಂದ ಬೆನ್ನುಹುರಿ ಅಪಘಾತಕ್ಕೊಳಗಾಗಿ ಮಲ್ಲಿಗೆ ವ್ಯಾಪಾರವನ್ನು ಕೈಬಿಟ್ಟಿದ್ದರು. ಇದೀಗ ಮಲ್ಲಿಗೆ ವ್ಯಾಪಾರವನ್ನು ಮತ್ತೆ ಪ್ರಾರಂಭಿಸಿ ಸ್ವತಃ ತಾವೇ ಮಲ್ಲಿಗೆಯ ಬಳ್ಳಿಯನ್ನು ಬೆಳೆಸಿ ಅದನ್ನು ಪೋಷಿಸಿ ಮಲ್ಲಿಗೆಯನ್ನು ಕಟ್ಟಿ ಅಂಗಡಿಗೆ ಮಾರಾಟ ಮಾಡುತ್ತಾ ತಿಂಗಳಿಗೆ ರೂ. 10,000/– ದಷ್ಟು ಸಂಪಾದನೆ ಮಾಡುತ್ತ ಸ್ವಾವಲಂಬಿ ಜೀವನ ಸಾಗಿಸಿ ಎಲ್ಲರಿಗೂ ಸ್ಫೂರ್ತಿಯಾಗುವಂತೆ ಬದುಕು ರೂಪಿಸಿಕೊಂಡಿದ್ದಾರೆ.

*Disability cannot stop me from becoming a complete personality*